**3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**

**SC.4/2020**

ದಿಃ 23.01.2026.

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

**Cw-7 Pw-7**

ಹೆಸರು ಃ ವೆಂಕಟಾಚಲಯ್ಯ
ತಂದೆಯ ಹೆಸರು ಃ ಲಕ್ಕಣ್ಣ
ವಯಸ್ಸು ಃ 52 ವರ್ಷ
ಉದ್ಯೋಗ ಃ ಕೂಲಿ ಕೆಲಸ
ವಾಸಸ್ಥಳ ಃ ಹುಣಸೆಘಟ್ಟ ಪಾಳ್ಯ

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ಈಗ ನನಗೆ ತೋರಿಸಿದತಹ ಸಹಿಯನ್ನು ಈಗ ಸುಮಾರು 5 ವರ್ಷಗಳ ಹಿಂದೆ ನಾನು ಕಾಟನ್ ಪಾಳ್ಯದಲ್ಲಿ ಮಾಡಿರುತ್ತೇನೆ. ಗಂಗಹನುಮಕ್ಕ ಮರಣ ಹೊಂದಿದ್ದು, ಆಕೆಯ ಮೃತ ದೇಹ ಅಲ್ಲಿ ಇತ್ತು. ಅಲ್ಲಿ ಪೋಲೀಸರು ಇದ್ದು ಮಹಜರು ಕ್ರಮ ಜರುಗಿಸುತ್ತಿದ್ದರು. ಸಾಕ್ಷಿ ಶವ ತನಿಖಾ ವರದಿಯಲ್ಲಿ ಇರುವ ತನ್ನ ಸಹಿಯನ್ನು ನೋಡಿ ಒಪ್ಪಿಕೊಂಡಿರುವ ಕಾರಣ ಶವ ತನಿಖಾ ವರದಿಯನ್ನು ನಿಪಿ 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ12(ಎ) ಎಂದು ಗುರುತಿಸಲಾಯಿತು. ಗಂಗಹನುಮಕ್ಕ ಹೇಗೆ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಬಿ ಡಿ ಜೆ ವಕೀಲರಿಂದ

2. ಮಹಜರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೋಲೀಸರು ಸಹಿ ಮಾಡಲು ಹೇಳಿದ ಕಾರಣ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಪ್ರಕರಣದ ಬಗ್ಗೆ ನನಗೆ ಯಾವುದೇ ವಿಚಾರ ತಿಳಿದಿರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
C/c 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.